ಕೋಣೆಗೆ ಬಂದ. ಮುದ್ರಿಸಿದ ಕೀರ್ತನೆಗಳ ಹಳೆಯ ಪುಸ್ತಕವೊಂದನ್ನು ಅಮ್ಮ ಓದುತ್ತಿದ್ದರು. ಈ ಜನ್ಮ ಹೀಗಾಯಿತು. ಮುಂದಿನ ಜನ್ಮವಾದರೂ ಚೆನ್ನಾಗಿರಲಿ ಭಗವಂತ! ನೆನಪಿರುವ ದಿನಗಳಿಂದ ಆ ಪುಸ್ತಕವನ್ನು ಅಮ್ಮನ ಕೈಯಲ್ಲಿ ಕಂಡಿದ್ದಾನೆ.

ಅಮ್ಮನ ಕೋಣೆಯಲ್ಲಿ ಒಂಟಿ ಮಂಚ. ಹಾಸಿಗೆ, ನೆಲುವಿನಲ್ಲಿ ತುಂಬಾ ವಸ್ತ್ರಗಳು, ಗೋಡೆಯಲ್ಲಿ ಮೂರು ಫೋಟೋಗಳು ಇಷ್ಟು ಮಾತ್ರ ಇದೆ. ಚಿತ್ರಗಳಲ್ಲಿ ಒಂದು ಅಮ್ಮನ ಮುಂದಿನ ಜನ್ಮವನ್ನು ಒಳ್ಳೆಯದಾಗಿಸಲಿರುವ ಭಗವಂತನದ್ದು. ಮತ್ತೊಂದು ಮದುವೆಯ ಬಳಿಕ ಅಪ್ಪ ಮತ್ತು ಅಮ್ಮ ಜೊತೆಗೆ ತೆಗೆಸಿಕೊಂಡದ್ದು. ಕೌಮಾರ್ಯವನ್ನು ಬಿಟ್ಟುಕೊಡದ ಮುಖವುಳ್ಳ ಓಜಸ್ವಿಯಾದ ಯುವಕ ಅಪ್ಪನ ತೋಳನ್ನು ಹಿಡಿದುಕೊಂಡು ಮೈತಾಗಿಸಿಕೊಂಡು ಒಬ್ಬಳು ಯುವತಿ ನಿಂತಿದ್ದಾಳೆ. ಅರೆಮುಚ್ಚಿದ ಕಣ್ಣುಗಳೊಡನೆ ನಿರ್ಜೀವವಾಗಿ ನಿಂತಿರುವ ಆ ಯುವತಿ ಸುಂದರಿಯಲ್ಲ. ಚಿತ್ರದಲ್ಲಿ ಹತ್ತಿರ ಹತ್ತಿರ ನಿಂತು ಆ ಇಬ್ಬರೂ ಒಳಜಗಲಿಯ ಎರಡು ತುದಿಗಳಲ್ಲಿ ಅಗಲಿ ಬದುಕುತ್ತಿದ್ದಾರೆಂದು ನಂಬಲು ಯಾವಾಗಲೂ ಪ್ರಯಾಸವೇ ಅನ್ನಿಸುತ್ತಿತ್ತು.

ಕೋಣೆಗೆ ಹೋಗುವಾಗಲೆಲ್ಲ ಕುತೂಹಲದಿಂದ ನೋಡುವುದು ಮೂರನೆಯ ಚಿಕ್ಕ ಚಿತ್ರ. ಪುಟ್ಟ ಕಣ್ಣುಗಳು ಕಡಿಮೆ ಕೂದಲಿರುವ ಶಿರಸ್ಸು, ಹಲ್ಲು ತೋರಿಸುತ್ತಿರುವ ಒಂದು ಪುಟ್ಟ ಮಗುವಿನ ಪಟ. ಆ ಮಗು ಇಪ್ಪತ್ತು ವರ್ಷಗಳಲ್ಲಿ ಎಷ್ಟು ಬದಲಾಗಿ ಹೋಯಿತು?

ಬಂದರೋ?

ಬಂದರು.

ಹೋಗುವುದಕ್ಕಿಲ್ಲವೊ?

ಸಮಯ ಸಿಕ್ಕಬೇಕಲ್ಲವೇ? ಅಸಹನೆಯಿಂದ ಮಗನೆಂದ.

ಅಪ್ಪನಿಗೆ ಸೌಖ್ಯವಿಲ್ಲ.

ಇನ್ನಷ್ಟು ಕುಡಿಯುವುದಕ್ಕೆ ಹೇಳು, ಕಾಯಿಲೆ ಬಂದರೆ ಹಣವಿದೆ.

ನೋಡೋದಕ್ಕೆ ಅವಳಿದ್ದಾಳಲ್ಲ.

ಡಾಕ್ಟರು ಬಂದು ಹೋದರು.

ಅವಳು ಕಾಡಿ ಕಾಡಿಯೇ ನಾನು ಹೀಗಾದ್ದು, ನಾನು ನಿನ್ನಮ್ಮ.

ನನ್ನ ಶಾಪ ಅದು. ದೇವರು ಕೊಡದೇ ಇರಲಾರ.

ಅಮ್ಮ ರೋಗಿಯ ಕೋಣೆಗೆ ಹೋಗಲಿಲ್ಲ. ದಿನಗಳ ಬಳಿಕ ಮರಣ ಎಂಬ ಘಟನೆಯ ಕುರಿತು ಮಗನು ಮೊದಲ ಬಾರಿಗೆ ಯೋಚಿಸಿದ. ಡಾಕ್ಟರ್ ಹೊರಟುಹೋಗುವಾಗ ಹೇಳಿದ ಮಾತುಗಳನ್ನು ಆತ ಮೆಲುಕು ಹಾಕುತ್ತಿದ್ದ.

ಏನು ಡಾಕ್ಟರು ಹೇಳಿದ್ದು!

ಮಗ ಕ್ರೂರವಾದ ವಿನೋದದಿಂದ ಹೇಳಿದ.

ಅಮ್ಮನ ಶಾಪ ಫಲಿಸುತ್ತದೆಂದೇ, ಅಪ್ಪ ಸುರಕ್ಷಿತರಲ್ಲ.

ಅಮ್ಮ ಮೆಲ್ಲನೆ ಹಿಂತಿರುಗಿ ಹೋದರು.

ಮುಂದಿನ ಪ್ರಭಾತ ವೇಳೆಯಲ್ಲಿ ಮಗ ಒಳಜಗಲಿಯ ಬದಿಯಲ್ಲಿ ಹಾಕಿದ ಹಾಸಿಗೆಯಲ್ಲಿ ಮಲಗಿ ಕಣ್ಣು ತೆರೆದ. ನಿದ್ದೆ ಬಿಟ್ಟ ಕ್ಷೀಣದಿಂದ ತಲೆ ಕಣ್ಣುಗಳು ಕಳೆಗುಂದಿವೆ. ರಾತ್ರಿಯಲ್ಲಿ ಹಲವುಬಾರಿ ಔಷಧಿ ಕೊಡಬೇಕು. ಪರಿಚಾರಕ ಕಾವಲು ಮಲಗಿದರೂ ನರಳಾಟವನ್ನು ಕೇಳಿಸಿಕೊಂಡಿರಲಿಲ್ಲ. ನಿದ್ದೆ ಆತನಿಗೆ ಪ್ರಜ್ಞೆಯಿಲ್ಲದ ಒಂದು ಅವಸ್ಥೆ.

ಹೊರಗೆ ಬೆಳಕು ಹರಡಿದೆ. ಆದರೆ ಒಳಜಗಲಿಯಲ್ಲಿ ಒಮ್ಮೆಯೂ ಬಿಟ್ಟು ಹೋಗದ ಕತ್ತಲು ಕವಿದಿದೆ.

ಒಟ್ಟಾರೆ ಮಗನನ್ನು ಹೈರಾಣವಾಗಿಸಿದೆ. ರೋಗಿ ಮಲಗಿರುವ ಕೋಣೆಯ ಬಾಗಿಲ ಬಳಿಗೆ ಹೋದ. ರಾತ್ರಿ ಮುಚ್ಚಿದ ಕಿಟಕಿಗಳು ತೆರೆಯದೆ ಇರುವುದರಿಂದ ಅಲ್ಲಿ ಬೆಳಕು ಕಡಿಮೆಯಿತ್ತು. ಮಂಚದಲ್ಲಿ ನೀಲಿ ಬಣ್ಣದಲ್ಲಿರುವ ಕಂಬಳಿಯ ಬುಡದಲ್ಲಿ ಅಪ್ಪ ಮಲಗಿದ್ದರು. ಶ್ವಾಸೋಚ್ಛ್ವಾಸದಿಂದ ಕಂಬಳಿಯಲ್ಲಿ ಚಲನೆಗಳನ್ನು ಕಾಣಬಹುದಿತ್ತು. ಮುಖ ಅವ್ಯಕ್ತವಾಗಿ ಕಾಣಿಸಿತು. ಆತ ಕೋಣೆಯ ಒಳಗೆ ಹೋದ. ಕಣ್ಣುಜ್ಜಿ ನೋಡಿದ. ಮಂಚದ ತಲೆಯಭಾಗದಲ್ಲಿ ಕುಷನ್ ಹಾಕಿದ ಚಿಕ್ಕ ಬೆತ್ತದ ಕುರ್ಚಿಯಲ್ಲಿ ಅಮ್ಮ ಕುಳಿತಿದ್ದಾರೆ.

ಅಮ್ಮ ಯಾವಾಗ ಇದರೊಳಗೆ ಬಂದರೆಂದು ವಿಚಾರಿಸಲಿಲ್ಲ. ಹೆಚ್ಚಾಗಿದೆಯೊ? ಕಿಟಕಿಗಳನ್ನು ತೆರೆದ. ಮುಂಜಾನೆಯ ಚಳಿಯೂ ಬೆಳಕೂ ಒಳಗೆ ಬಂತು. ಅಪ್ಪ ಕಣ್ಣು ತೆರೆದರು.

ಹೇಗಿದ್ದೀರಿ?

ಅಪ್ಪ ಹೂಂ ಗುಟ್ಟಿದರು. ಹೆಚ್ಚು ಮಾತನಾಡಲು ಸಾಧ್ಯವಿಲ್ಲ...